ಶ್ರೀ ಆರ್.ವಿ. ದೇಶಪಾಂಡೆ:- ಅವೆಲ್ಲಾ ಅನ್ನಲರೀಸ್. ಅವರ ಮೇಲೆ ಸರ್ಕಾರಕ್ಕೆ ಕಂಟ್ರೋಲ್ ಇಲ್ಲ, ಸರ್ಕಾರದ ಸ್ವಾಮಿತ್ವವೂ ಇಲ್ಲ. ಹಾಗಾಗಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಇವತ್ತು 122 ಕೋಟಿ ರೂಪಾಯಿ ಮೈಸೂರು ಲ್ಯಾಂಪ್ಸ್‌ನದ್ದು ಸೇಲ್ಸ್ ಟ್ಯಾಕ್ಸ್, ಪ್ರಾವಿಡೆಂಟ್ ಫಂಡ್ ಇದಕ್ಕೆ ರಾಜ್ಯಸರ್ಕಾರ ಕೊಡಬೇಕಾಗಿದೆ. Accumulated loss is Rs.92 crores.

ಉಪಾಧ್ಯಕ್ಷರು:- ಮಾನ್ಯ ವಿ. ಪಾಪಣ್ಣ ಅವರ ಪ್ರಶ್ನೆ ಸಂಖ್ಯೆ 2189 ಮತ್ತು ಬಿ.ಬಿ. ಶಿವಪ್ಪ ಅವರ ಪ್ರಶ್ನೆ ಸಂಖ್ಯೆ 1416-ಇವುಗಳನ್ನು ತಡೆಹಿಡಿಯಲಾಗಿದೆ. ಇನ್ನು ಮುಂದೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷರೆ, ದಿನಾಂಕ 20-3-2003ರಲ್ಲಿ ಲಿಖಿತ ಮೂಲಕ ಉತ್ತರಿಸುವ ಹದಿನಾಲ್ಕನೇ ಪಟ್ಟಿಯ ಉತ್ತರಿಸಬೇಕಾದ 68 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:- ಮಂಡಿಸಲಾಯಿತು.

ಅನುಬಂಧ-1

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಇರತಕ್ಕಂಥ ಕೆಳಕಾಣಿಸಿದ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಕಾರಾಗೃಹಗಳ ಸೇವೆ (ನೇಮಕಾತಿ) ನಿಯಮಗಳನ್ನು 2002ನ್ನು ರಚಿಸಿ ದಿನಾಂಕ 17-12-2002 ರಂದು ಹೊರಡಿಸಲಾದ ಡಿಪಿಎಆರ್:102: ಎಸ್‌ಆರ್‌ಡಿ: 97ನೇ ಸಂಖ್ಯೆಯ ಅಧಿಸೂಚನೆ;
2. ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳನ್ನು 1977ರ ನಿಯಮ 5(5)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29-1-2003 ರಂದು ಹೊರಡಿಸಲಾದ ಡಿಪಿಎಆರ್:74:ಎಸ್‌ಆರ್‌ಡಿ:2002ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 39ರ ಪ್ರಕರಣದ ಮೇರೆಗೆ:

3. ಮೆ: ರೇವಾ ಎಲೆಕ್ಟ್ರಿಕ್ ಕಾರ್ ಕಂಪನಿ ಪ್ರೈವೇಸ್ ಲಿಮಿಟೆಡ್‌ನವರು ಸಿದ್ಧ ವಸ್ತುಗಳನ್ನು ತಯಾರಿಸಿ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ 7 ವರ್ಷಗಳವರೆಗೆ ವಿನಾಯಿತಿ ಅಥವಾ 9 ವರ್ಷಗಳವರೆಗೆ ಮಾರಾಟ ತೆರಿಗೆ ಪಾವತಿ ಮುಂದೂಡಿಕೆಯನ್ನು ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ ಕೆಲವು ನಿರ್ಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ, ವಿನಾಯಿತಿ ನೀಡಿ ದಿನಾಂಕ 11-2-2003 ರಂದು ಹೊರಡಿಸಲಾದ ಎಫ್‌ಡಿ:7:ಸಿಎಸ್‌ಎಲ್:2003 (1)ನೇ ಸಂಖ್ಯೆಯ ಅಧಿಸೂಚನೆ;